೮) ಮಂಗಳೂರಿನ ಅಳಿವೆ ಬಾಗಿಲಲ್ಲಿ ಹೂಳು ಎತ್ತದೆ ಇದ್ದುದರಿಂದ ಮೀನುಗಾರರ ಮುಷ್ಕರ

ಶ್ರೀ ಬಿ. ಎಂ. ಇದಿನಬ್ಬ.—(ಉಳ್ಳಾಲ) ದಕ್ಷಿಣ ಕನ್ನಡದ ಮಂಗಳೂರು ಅಳಿವೆಬಾಗಿಲಲ್ಲಿ ಹೂಳೆತ್ತದೆ ಇದ್ದುದರಿಂದ ಕಳೆದ ಐದಾರು ವರ್ಷಗಳಲ್ಲಿ ೧೫ಕ್ಕೂ ಮಿಕ್ಕ ಜನರು ಮೃತಪಟ್ಟರು. ೧೨ಕ್ಕೂ ಮೇಲ್ಪಟ್ಟು ಬೋಟುಗಳು ಲಾಂಚುಗಳು ಮುಳುಗಿ ನಾಶವಾಯಿತು. ಭಾರಿ ಹಾನಿಯಾಗಿ ಮೀನುಗಾರರು ಕಷ್ಟನಷ್ಟಗಳನ್ನು ಅನುಭವಿಸಿದರು. ತೊಂದರೆ ಕಷ್ಟಗಳ ಪರಿಹಾರ ಆಗದೇ ಇದ್ದಾಗ ಕಳೆದ ಅಕ್ಟೋಬರ್‌ನಲ್ಲಿ ಜಿಲ್ಲೆಯ ಕರಾವಳಿಯ ಮೀನುಗಾರರೆಲ್ಲಾ ಒಟ್ಟಾಗಿ ಐದಾರು ದಿವಸಗಳ ಧರಣಿ ಮುಷ್ಕರ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಮಾಡಿ ನ್ಯಾಯ ಕೇಳಿದರು, ಆದು ವಿಕೋಪಕ್ಕೆ ಹೋಗುವುದನ್ನು ಅರಿತು ನೀರಾವರಿ ಖಾತೆಯ ಮುಖ್ಯ ಇಂಜಿನಿಯರ್ ಧರಣಿ ಮಾಡುತ್ತಿರುವ ಮೀನುಗಾರರನ್ನು ಭೇಟಿಯಾಗಿ ಶೀಘ್ರ ಹೂಳೆತ್ತುವ ಕೆಲಸ ಮಾಡಿಸುವುದಾಗಿ ಭರವಸೆ ಕೊಟ್ಟ ಬಳಿಕ ಧರಣಿ ಹಿಂತೆಗೆದರು. ಆದರೆ ಈವರೆಗೂ ಹೂಳೆತ್ತುವ ಕೆಲಸ ಪ್ರಾರಂಭವಾಗಿಲ್ಲ. ಇದೀಗ ಪುನಃ ಮೀನುಗಾರರು ಹತ್ತಾಶರಾಗಿ ಧರಣಿ ಇನ್ನಿತರ ರೀತಿಯ ಹೋರಾಟಕ್ಕೆ ಸಿದ್ಧರಾಗುತ್ತಿದ್ದಾರೆ ಆದಕಾರಣ ಹೂಳೆತ್ತುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಪಂರಣ ಕೂಪ ಈ ಅಳಿವೆ ಬಾಗಿಲಲಿ

ಅನೇಕರನ್ನು ಬಲಿ ತೆಗೆದುಕೊಂಡಿತು ಈ ಹೆಬ್ಬಾಗಿಲು,

ಹೂಳೆತ್ತಿರಿ, ಹೂಳೆತ್ತಿರಿ, ಹೂಳೆತ್ತಿರಿ,

ಈ ಮಹಾ ಕೆಲಸಕ್ಕೆ ತೋರಿಸಿ ತರಾತುರಿ ಎಂದು ಹೇಳುತ್ತಾ

ಬಂದರು ಮತ್ತು ಮೀನುಗಾರಿಕಾ ಮಂತ್ರಿಗಳ ಗಮನ ಸೆಳೆಯುತ್ತೇನೆ ಬರಾಬರಿ.

ಪ್ರೊ ಎ. ಲಕ್ಷ್ಮೀಸಾಗರ್.—ಉತ್ತರ ತರಿಸಿಕೊಡುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.—ಇಷ್ಟು ಮಹತ್ವವಾದ ವಿಷಯಕ್ಕೆ ಉತ್ತರವಿಲ್ಲವೇ?

೯) ರೋಣ ತಾಲ್ಲೂಕು ನರೇಗಲ್‌ನಲ್ಲಿ ವಿದ್ಯುತ್ ಇಲಾಖೆಯ ಶಾಖೆಯನ್ನು ಪುನ: ಪ್ರಾರಂಭಿಸುವುದು

ಶ್ರೀ ಜ್ಞಾನದೇವ ಎಸ್ ದೊಡ್ಡಮೇಟಿ.— ಮಾನ್ಯ ಅಧ್ಯಕ್ಷರೆ, ರೋಣ ತಾಲ್ಲೂಕ ನರೇಗಲ್ಲದಲ್ಲಿ ವಿದ್ಯುತ್ ಇಲಾಖೆಯ ಶಾಖೆಯನ್ನು ಈ ಹಿಂದೆಯೇ ಹೊಂದಿತ್ತು. ನಂತರ ಗಜೇಂದ್ರಗಡಕ್ಕೆ ಕೆತ್ತು ಕೊಂಡು ಹೋಯಿತು. ಸದರಿ ವರ್ಗಾವಣೆಯಿಂದ ಈ ಭಾಗದ ವಿದ್ಯುತ್ ಬಳಕೆದಾರರಿಗೆ, ಲೆಕ್ಕಪತ್ರ ದಲ್ಲಿ ಚೊಕಿಬಿಂದಾಗಿ, ಗಜೇಂದ್ರಗಡಕ್ಕೆ ಹೋಗಬೇಕಾಗಿದೆ. ಯಾವುದೇ ಆರ್ಥಿಕ ಭಾರ ಹೆಚ್ಚಿಗೆ ಬೀಳದಿದ್ದರೂ ಲೆಕ್ಕ ಪತ್ರದ ಶಾಖೆಯನ್ನು ಪ್ರಾರಂಭಿಸದೇ ಮುಂದುಕ್ಕೆ ಹಾಕುತ್ತಿರುವುದು, ವಿದ್ಯುತ್ ಬಳಕೆದಾರರಲ್ಲಿ ಅಸಂತೋಷವುಂಟಾಗಿ ಮುತ್ತಿಗೆ ಮುಂತಾದ ಕಾರ್ಯಕ್ರಮ ಹಾಕಿಕೊಂಡಿದ್ದು ಉಂಟು. ಅಲ್ಲದೇ ಈ ಹಿಂದೆಯೇ ಗೌರವಾನ್ವಿತ ವಿಧಾನ ಸಭೆಯಲ್ಲಿಯೇ ಈ ಕುರಿತು ಭರವಸೆಯನ್ನು ಕೊಟ್ಟಿರುವುದಿರಿ ಹೀಗಿದ್ದೂ ಸೂಕ್ತ ಕ್ರಮ ತೆಗೆದುಕೊಳ್ಳದೇ ಇರುವುದು ನೋವನ್ನುಂಟು ಮಾಡಿದೆ. ಅಲ್ಲದೆ ಜನರ ಅಸಂತೋಷವನ್ನು ಕಟ್ಟಿಕೊಂಡು ಯಾವುದೇ ಇಲಾಖೆ ಕೆಲಸವನ್ನು ಸುಗಮವಾಗಿ ನಡೆಸುವುದು ಕಷ್ಟದ ಕೆಲಸ. ಗಜೇಂದ್ರಗಡದಲ್ಲಿಯೇ ಕೆಲಸ ಮಾಡುತ್ತಿರುವವರಲ್ಲಿ ಮೂರು ನಾಲ್ಕು ಜನರನ್ನು ನರೇಗಲ್ಲಿಕ್ಕೆ ವರ್ಗಾಯಿಸಿದರೆ ಸಾಕು. ಇನ್ನೊಮ್ಮೆ ಹೇಳುವೆ, ಇದರಿಂದ ನಿಗಮಕ್ಕೆ ಆರ್ಥಿಕ ಹೊರೆ ಬೀಳುವದಿಲ್ಲ. ವಿದ್ಯುತ್ ಬಳಕೆದಾರರು ಹೆಚ್ಚಿಗೆ ಆಗಿರುವುದು ಒಮ್ಮೆ ಕೊಟ್ಟ ಭರವಸೆ ಈಡೇರಿಸದೆ ಇರುವುದು. ಅಲ್ಲಿನ ಜನತೆಗೆ ತೊಂದರೆಯು ಏನಿದೆ ಎನ್ನುವುದು ಕೂಡಾ ತಿಳಿಯದಾಗಿದೆ. ಶಾಖೆಯನ್ನು ಹೊಸದಾಗಿ ತೆರೆಯಬೇಕಾಗಿಲ್ಲ. ಒಮ್ಮೆ ತೆರೆದ ಶಾಖೆಯನ್ನ ಪುನ: ಪ್ರಾರಂಭಿಸಬೇಕಷ್ಟೆ ಎಂಬ ಅಂಶವನ್ನು ಮಿದ್ಯುತ್ ಮಂತ್ರಿಗಳ ಗಮನಕ್ಕೆ ತರಬಯಸುವೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಅಧ್ಯಕ್ಷರೆ, ವಿದ್ಯುತ್ ಮಂತ್ರಿಗಳ ಈ ಕೆಳಕಂಡ ಪ್ರಶ್ನೆಯನ್ನು ಕೊಡುತ್ತೇನೆ. ರೋಣ ತಾಲ್ಲೂಕಿನ ನಾರೇಗಲ್‌ನಲ್ಲಿ ಹಾಲಿ ಲೆಕ್ಕ ರಹಿತ ಶಾಖಾ ಕಛೇರಿಯಿದೆ.